# Now, discount on vacant medical seats

## NRI, management quota seats not taken in mop up round

TANU KULKARNI
BENGALURU

Medical course aspirants have one last chance to bag a seat in the coming week, and they have the option of getting the seat at half the price.

Although demand for medical seats was high, the NRI and management quota seats were not taken during the mop up round as they were very expensive. The cost of the tuition fees for management quota seats ranged from ₹22,12,450 to ₹40,12,450 per annum. The tuition fee for the institutional quota was, however, pegged at ₹6,83,100 lakh, and all the seats were taken.

Out of the total 964 medical seats available under the mop up round, 658 belonged to the management quota.

After the mop up round for medical counselling ended on Friday, there were no takers for 471 management quota seats.

M.R. Jayaram, chairman of the Karnataka Professional Colleges Foundation, said, "If the seats are not filled, managements will have to reduce the cost. They will have to look at the market condition and make changes accordingly."

However, a student, who attended the counselling in the mop up round, said, "If a medical seat was available for around ₹15 lakh per annum in the mop up round, I would have taken the seat. It is unfair to make seats available at a discount now. I have a feeling that these seats are reserved by college managements prior to the counselling. In fact, the seats are priced so high so that nobody takes them and they go back to the colleges."

According to the Supreme Court, the vacant NRI and management quota seats have to be handed over to the respective institutions with a list of candidates who were not allotted seats, in the order of merit in the ratio of 10 candidates for each vacancy.



Minister for Medical Education D.K. Shivakumar visiting the KEA during counselling on Friday. • V. SREENIVASA MURTHY

## ಶುಲ್ಕ ಹೆಚ್ಚಳಕ್ಕೆ ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಸಮರ್ಥನೆ

# ‘ಮೆಡಿಕಲ್‌ಗೆ ₹50 ಸಾವಿರ ಕೊಡೋಕೆ ಆಗಲ್ವ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುಕೆಜಿ, ಎಲ್‌ಕೆಜಿಗೆ 50 ಸಾವಿರ ಕೊಟ್ಟು ಸೇರಿಸ್ತಾರೆ. ಮೆಡಿಕಲ್ ಓದಿಸ್ಬೇಕು ಅನ್ನೋರಿಗೆ ₹50 ಸಾವಿರ ಕೊಡೋಕೆ ಆಗಲ್ವ? ಡಾಕ್ಟರ್ ಆದ್ಮೇಲೆ ಎಷ್ಟು ಸಂಬಳ ತಗೋತಾರೆ ಗೊತ್ತಾ?’

–ಇದು ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್ ಅವರ ಮಾತು. ಕಳೆದ ವರ್ಷ ₹16 ಸಾವಿರ ಇದ್ದ ವೈದ್ಯಕೀಯ ಕೋರ್ಸ್ ಶುಲ್ಕ ಏಕಾಏಕಿ ₹50 ಸಾವಿರಕ್ಕೆ ಏರಿಕೆಯಾದ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರ ನೀಡಿದ ಉತ್ತರ ಹೀಗಿತ್ತು.

‘ವೈದ್ಯಕೀಯ ಕೋರ್ಸ್‌ಗೆ ಸರ್ಕಾರ ಒದಗಿಸುವ ಸೌಲಭ್ಯ ಲೆಕ್ಕ ಹಾಕಿದ್ರೆ ಒಬ್ಬ ವಿದ್ಯಾರ್ಥಿಗೆ ₹ 10 ಲಕ್ಷ ಖರ್ಚಾಗ್ತದೆ. ₹16 ಸಾವಿರ ಶುಲ್ಕ ಕೊಡ್ತಿದ್ರಲ್ಲ, ಅದರಲ್ಲಿ ₹15 ಸಾವಿರ ಆಸ್ಪತ್ರೆಗೆ ಹೋಗ್ತಿತ್ತು. ಶುಲ್ಕ ಹೆಚ್ಚು ಮಾಡಿದ್ರೆ ಯಾರೂ ಏನೂ ಹೇಳಲ್ಲ ಬಿಡಿ’ ಎಂದೂ ಹೇಳಿದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಶನಿವಾರ ದಿಢೀರ್ ಭೇಟಿ ನೀಡಿದ ಸಚಿವರು ಕೊನೆಯ ದಿನದ ವೈದ್ಯಕೀಯ ಕೋರ್ಸ್‌ಗಳ ಕೌನ್ಸೆಲಿಂಗ್ ಪ್ರಕ್ರಿಯೆ ವೀಕ್ಷಿಸಿ, ಸುದ್ದಿಗಾರರೊಂದಿಗೆ ಮಾತನಾಡಿದರು.

**ಅವಕಾಶ ಅಸಾಧ್ಯ:** ‘ಕೇರಳ ಹಾಗೂ ಕೊಡಗಿನಲ್ಲಿ ಪ್ರವಾಹಕ್ಕೆ ಸಿಲುಕಿ, ಸಿಇಟಿ ಕೌನ್ಸೆಲಿಂಗ್ ತಪ್ಪಿಸಿಕೊಂಡ ವಿದ್ಯಾರ್ಥಿಗಳಿಗೆ ಮತ್ತೊಮ್ಮೆ ಅವಕಾಶ ನೀಡಲು ಸಾಧ್ಯವಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ಸೆಪ್ಟೆಂಬರ್ 30ರೊಳಗೆ ಕಾಲೇಜುಗಳು ಪ್ರಾರಂಭಿಸಬೇಕು ಎಂಬ ಗಡುವು ಇದೆ. ಈ ವೇಳೆ ಸರ್ಕಾರ ಮಧ್ಯ ಪ್ರವೇಶಿಸುವುದಿಲ್ಲ. ಅಲ್ಲದೆ, ಪ್ರವಾಹಕ್ಕೆ ಸಿಲುಕಿ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ ಎಂದು ಯಾವ ವಿದ್ಯಾರ್ಥಿಗಳೂ ಮನವಿ ಮಾಡಿಲ್ಲ. ಒಂದು ವೇಳೆ ಈಗ ಯಾರಾದರೂ ಹೇಳಿದರೆ, ಸರ್ಕಾರ ಏನೂ ಮಾಡಲು ಆಗುವುದಿಲ್ಲ’ ಎಂದರು.

‘ಕೌನ್ಸೆಲಿಂಗ್ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯುತ್ತಿದೆ. ಒಟ್ಟು 49 ವೈದ್ಯಕೀಯ ಕಾಲೇಜುಗಳ 6,260 ವೈದ್ಯಕೀಯ ಸೀಟುಗಳಿಗೆ ಕೌನ್ಸೆಲಿಂಗ್ ನಡೆದಿದ್ದು, 740 ಸೀಟುಗಳು ಉಳಿದಿದ್ದವು. ದಂತ ವೈದ್ಯಕೀಯ ಕೋರ್ಸ್‌ಗಳಲ್ಲಿ ಉಳಿದಿರುವ 772 ಸೀಟುಗಳಿಗೆ ಸೆ.15ರೊಳಗೆ ಮಾಪ್‌ಅಪ್ ಸುತ್ತು ನಡೆಸಲಾಗುತ್ತದೆ’ ಎಂದು ಹೇಳಿದರು.

**ಸುಪ್ರೀಂಕೋರ್ಟ್ ಮೊರೆ:** ‘ಮಾನ್ಯತೆ ರದ್ದಾಗಿರುವ ಆಕಾಶ್, ಆಕ್ಸ್‌ಫರ್ಡ್, ಸಂಭ್ರಮ ಹಾಗೂ ಶ್ರೀದೇವಿ ಕಾಲೇಜುಗಳು ಸುಪ್ರೀಂಕೋರ್ಟ್ ಮೆಟ್ಟಿಲೇರಿವೆ. ಈ ಕಾಲೇಜುಗಳಲ್ಲಿ 600 ಸೀಟುಗಳಿದ್ದು, ಒಂದು ವೇಳೆ ಆ ಕಾಲೇಜುಗಳಿಗೆ ಅನುಮತಿ ಸಿಕ್ಕರೆ ಆ ಸೀಟುಗಳಿಗೂ ಕೌನ್ಸೆಲಿಂಗ್ ನಡೆಸುತ್ತೇವೆ’ ಎಂದು ತಿಳಿಸಿದರು.